

ಹೇಗೆಂಬ ತಲೆಬುಡವಿಲ್ಲದ ಆಲೋಚನೆಯಂತೆ. ಒಂದೊಂದು ಹಕ್ಕಿಯ ಜೀರ್ಣಾಂಗದ ವ್ಯವಸ್ಥೆಯೂ ಬೇರೆ ಬೇರೆ. ಪ್ರತಿಯೊಂದರ ಆಹಾರವೂ ಬೇರೆ ಬೇರೆ. ನವಿಲಿನೊಳಗೆ ಹಾವಿನ ವಿಷ ಕರಗಿ ಒಂದಾಗಬಹುದು. ಅದೇ ಶಕ್ತಿ ಅದರ ಮಾಂಸದಲ್ಲೂ ಉಳಿದು ಮುಂದುವರೆದಿರುತ್ತದೆ ಎಂದು ನಂಬುವ ತರ್ಕವೇ ವಿಚಿತ್ರ. ಇನ್ನು ವೈರಿಗಳ ನಾಶ ಮಾಡಲು ಮಾಂತ್ರಿಕರು ಹುಟ್ಟು ಹಾಕಿರುವ ಮೌಢ್ಯದ ಪರಮಾವಧಿಗೆ ಗೂಬೆ, ಕೆಂಪುಕಾಗೆ, ಪಾರಿವಾಳ, ಹದ್ದು, ಹಾವು ಮುಂತಾದ ಜೀವಗಳು ಈಗಾಗಲೇ ದೊಡ್ಡ ಸಂಖ್ಯೆಯಲ್ಲಿ ಪ್ರಾಣ ಬಿಟ್ಟಿವೆ. ಮನುಷ್ಯನ ಮೂರ್ಖ ಆಲೋಚನೆಗೆ ಸುಖಾಸುಮ್ಮನೆ ಜೀವಿಗಳ ಹನನ ನಡೆಯುತ್ತಲೇ ಇದೆ.

ಮುಂದೆ ಆತ ತಲುಪಿಸಿದ ಝರಿಯ ಬಳಿ ಕುಳಿತಾಗ ನಾನೊಂದು ಮುದ್ದಾದ ಬಣ್ಣದ ಹಕ್ಕಿಯನ್ನು ಕಂಡೆ. ಗುಬ್ಬಿಯಾಕಾರದ ಅದು ಹಾರುತ್ತಾ ಬಂದು ಮರದ ಬೊಡ್ಡೆಯ ಮೇಲೆ ಕೂರುತ್ತಲೇ ಪಟಪಟನೆ ಚಿತ್ರಗಳ ಸೆಳೆದೆ. ಅದರ ಹಳದಿ ತಲೆ, ಕೆಂಬಣ್ಣದ ರೆಕ್ಕೆ, ಮೈ ಮೇಲಿನ ಮತ್ತು ಬಾಲದ ಮೇಲಿದ್ದ ಕಪ್ಪು ಚಿತ್ರಗಳು ಆಕರ್ಷಕವಾಗಿದ್ದವು. ಪಕ್ಷಿ ತೋರುಗನಿಗೆ ಇದರ ಹೆಸರೇನೆಂದು ಕೇಳಿದಾಗ ತಕ್ಷಣ ಮಿನ್ಲಾ ಸಾರ್ ಎಂದ. ಎಷ್ಟೊಂದು ಚೆಲುವಾದ ಹಕ್ಕಿಯಲ್ಲವೇ ಎಂದು ಸಂತಸದಿಂದ ನಕ್ಕೆ. ನೋಡಲು ಸಣ್ಣ ಹಕ್ಕಿಯಾದರೂ ಇದರ ಮಾಂಸ ಬಲು ರುಚಿ ಸರ್ ಎಂದು ಹೇಳಿ ದಂಗುಬಡಿಸಿದ. ಇಲ್ಲಿನ ಜನ ಇದನ್ನು ಹುಡುಕಿ ಕೊಂದು ತಿನ್ನುತ್ತಾರೆ. ಜನರದ್ದು ಏನೋ ನಂಬಿಕೆ ಸರ್ ಎಂದು ಸೇರಿಸಿದ. 'ಥೂ ನಿಮ್ ಮನೆ ಹಾಳಾಗ! ಅಲ್ಲಯ್ಯ ಐವತ್ತು ಗ್ರಾಂ ಮಾಂಸ ಕೂಡ ಅದರ ಮೈಯಲ್ಲಿಲ್ಲ. ಅದನ್ನೂ ಬಿಡದೆ ಮುಕ್ಕೀರಲ್ಲಯ್ಯ ಎಂಥ ಜನ ನೀವು' ಎಂದು ಮುಖ ಸಿಂಡರಿಸಿದೆ. ನಾನು ಈಗ ತಿನ್ತಿಲ್ಲ ಸರ್. ಆದರೆ ಜನರ ನಂಬಿಕೆ ಇದನ್ನು ಬಿಡ್ತಿಲ್ಲ. ಹಿಂಗಾಗಿಯೇ ಇದರ ಸಂತತಿ ಈಗ ಕಮ್ಮಿಯಾಗಿದೆ ಎಂದ. ಅಷ್ಟೊಂದು ಸುಂದರ ಬಣ್ಣದ